ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-294568 | ತ್ರೈಮಾಸಿಕ ಪತ್ರಿಕೆ | ಮಿಂಚಂಚೆ : tkvk@taralabalu.org

ಅಕ್ಟೋಬರ್ - ಡಿಸೆಂಬರ್ 2008 | (Quarterly News Letter) | ಸಂಪುಟ 2. ಸಂಚಿಕೆ : 1

**ಸಿಂಚನಕ್ಕೆ ಮುನ್ನ..........**

ಹೊಸ ವರ್ಷ 2009 ಆರಂಭವಾಗಿದೆ. ಸರ್ವ ಸಜ್ಜನರಿಗೆ ಶುಭಾಷಯಗಳು. ಕಳೆದ ಮೂರು ತಿಂಗಳುಗಳಲ್ಲಿ ನಾವು ಹಮ್ಮಿಕೊಂಡ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿಯೊತ್ತ ಈ ಪತ್ರಿಕೆ ನಿಮ್ಮ ಕೈ ಸೇರುವಾಗ, ನಾವು ತರಳಬಾಳು ಹುಣ್ಣಿಮೆ ಮಹೋತ್ಸವ ಸಂದರ್ಭದಲ್ಲಿ ಪ್ರ ಪ್ರಥಮ ಬಾರಿಗೆ ಆಯೋಜಿಸಲಾಗುತ್ತಿರುವ ತರಳಬಾಳು ಕೃಷಿ ಮೇಳದ ಆಯೋಜನೆಯ ತರಾತುರಿಯಲ್ಲಿ ಮುಳುಗಿರುತ್ತೇವೆ. ಕೃಷಿ ಸಮಗ್ರ ಮಾಹಿತಿ, ವಸ್ತು ಪ್ರದರ್ಶನ, ಗೋಷ್ಠಿ, ಸಂವಾದ ಕಾರ್ಯಕ್ರಮ ಇತ್ಯಾದಿಗಳನ್ನೊಳಗೊಂಡ ವಿಶಿಷ್ಟ ಮೇಳವು ಹುಣ್ಣಿಮೆಯಲ್ಲಿ ಅನಾವರಣಗೊಳ್ಳಲಿದೆ. ಲಕ್ಷಾಂತರ ರೈತ ಬಂಧುಗಳು ಒಂದೆಡೆ ಕಲೆತು ಕಲಿಯುವ ನಾಡ ಹಬ್ಬದಂತಿರುವ ಈ ಸಂದರ್ಭ ಅತ್ಯಂತ ಸ್ಮರಣೀಯವೆನಿಸಲಿದೆ.

ಈ ಹಿಂಗಾರಿನಲ್ಲಿ ಬೆಳೆಗಳ ಭರಾಟೆ ಕಡಿಮೆಯಿದ್ದರೂ, ಕಾಲುವೆ ನೀರಿನ ಬೆಂಬಲದಲ್ಲಿ ಭತ್ತದ ಬೆಳೆಗೆ ಮುಂದಾಗಿರುವ ರೈತ ಸಮುದಾಯ ಮತ್ತೊಮ್ಮೆ 'ಗೊಬ್ಬರ ಗಲಾಟೆ' ಯ ಬಿಸಿ ನೋಡಿದೆ.

ಈ ನಿಟ್ಟಿನಲ್ಲಿ ಸರ್ಕಾರಿ ಸಂಬಂಧಿ ಶಾಸನಗಳು ಮಾರ್ಪಾಡಾಗಿ, ರೈತರಿಗೆ ಅನುಕೂಲಕರವಾಗಲೆಂದು ಆಶಿಸೋಣ. ಬೆಳೆದುದನ್ನು ಮಾರುವವ ಮತ್ತು ಕೊಳ್ಳುವ ಗ್ರಾಹಕರ ಪರಿಸ್ಥಿತಿ ಎಂದಿಗೂ ಶೋಚನಿಯ ಸ್ಥಿತಿಗೆ ತಲುಪಿಲ್ಲ. ಆದರೆ ದುರಾದೃಷ್ಟವಶಾತ್ ಬೆಳೆಯುವವನ ಪರಿಸ್ಥಿತಿಯೇ ಸದಾ ಹದಗೆಡುತ್ತಿರುವುದು ಖೇದಕರವಾದ ವಿಷಯ. ಈ ವಿಷಮ ಪರಿಸ್ಥಿತಿಯಲ್ಲಿ ಕೃಷಿ ಭೂಮಿ ಇರುವಷ್ಟರಲ್ಲಿಯೇ (ಕಡಿಮೆ ಇದ್ದರೂ ಸಹ) ಹೆಚ್ಚುವರಿ ಲಾಭಾಂಶ ಗಳಿಸುವೆಡೆಗೆ ನಮ್ಮೆಲ್ಲರ ಪ್ರಯತ್ನ ಸಾಗಬೇಕಾಗಿದೆ.

ಪ್ರಸ್ತುತ ಮಳೆ ನೀರು ಸಂಗ್ರಹಣೆ, ಸಂರಕ್ಷಣೆ ಮತ್ತು ಸದ್ಬಳಕೆ ನಮ್ಮೆಲ್ಲರ ಆದ್ಯ ಕೆಲಸವಾಗಿ ಮಾರ್ಪಾಡಾಗಬೇಕಾಗಿದೆ. ಜೊತೆಗೆ ಸಮಾನಾಸಕ್ತಿ ರೈತ ಸಮೂಹಗಳನ್ನು ರಚಿಸಿ, 'ನಿಖರ ಕೃಷಿ ಪದ್ಧತಿ' ಅನುಸರಿಸಿ ಮಾರುಕಟ್ಟೆ ಬೇಡಿಕೆಯಾಧಾರಿತ ಬೆಳೆಗಳನ್ನು ಉತ್ಪಾದಿಸುವ ಕಾರ್ಯದಲ್ಲಿ ತೊಡಗಬೇಕಾಗಿದೆ. ವ್ಯವಸ್ಥಿತ ಯೋಜನೆ, ಸೂಕ್ತ ತಂತ್ರಜ್ಞಾನ ಮಾಹಿತಿ ಮತ್ತು ಜವಾಬ್ದಾರಿಯುತ ಪರಿಶ್ರಮ ಈ ಮೂರು ಮಂತ್ರಗಳೊಂದಿಗೆ ಕೃಷಿ ಕೈಗೊಂಡರೆ ಯಾವುದೇ ರೈತನೂ ವಿಫಲತೆಯನ್ನು ದೂರವಿಡಲು ಸಾಧ್ಯ.



ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ದಿನಾಂಕ 23-10-2008 ರಂದು ಕದಳೀವನದಲ್ಲಿ ಪೂಜ್ಯ ಶ್ರೀ ತರಳಬಾಳು ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ. ಎನ್. ರವರು ಕೇಂದ್ರದ ಹಿಂದಿನ 6 ತಿಂಗಳಲ್ಲಿ (ಮುಂಗಾರು) ಹಮ್ಮಿಕೊಂಡಿದ್ದ ಕಾರ್ಯ ಚಟುವಟಿಕೆಗಳನ್ನು ಹಾಗೂ ಮುಂದಿನ 6 ತಿಂಗಳ (ಹಿಂಗಾರು) ಕ್ರಿಯಾ ಯೋಜನೆಯನ್ನು ಮಂಡಿಸಿದರು. ನಂತರ ಚರ್ಚೆಯ ಮೂಲಕ ಎಲ್ಲಾ ಸಮಿತಿ ಸದಸ್ಯರಿಂದ ಸೂಕ್ತ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲಾಯಿತು.



ಪರಮಪೂಜ್ಯರಿಂದ ಕದಳೀವನದಲ್ಲಿ ಪ್ರಥಮ ಕಲ್ಪವೃಕ್ಷವು ನೆಡಿಸಲ್ಪಟ್ಟಿತು

## ಆಚರಿಸಿದ ದಿನಗಳು :



ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆ, ದಾವಣಗೆರೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 16 ರಂದು ಹಮ್ಮಿಕೊಂಡ ವಿಶ್ವ ಆಹಾರ ದಿನಾಚರಣೆಯಲ್ಲಿ ಜಲ ಸಾಕ್ಷರತ ಸಂಸ್ಥೆಯ ಅಶೋಕ ಫೆಲೋ ಪ್ರತಿಷ್ಠಿತ ಪ್ರಶಸ್ತಿ ವಿಜೇತರಾದ ಶ್ರೀ ಅಯ್ಯಪ್ಪ ಮಸಗಿಯವರಿಂದ " Food and Water Securtiy : the Challenges of Climate Change and Bio -energy " ಕುರಿತು ಉಪನ್ಯಾಸ.



ಡಿಸೆಂಬರ್ 23 ರಂದು ರೈತ ದಿನಾಚರಣೆಯ ಅಂಗವಾಗಿ ಪ್ರಶಸ್ತಿ ವಿಜೇತ ರೈತ / ರೈತ ಮಹಿಳೆಯರಾದ ಶ್ರೀ ರೇಣುಕಾರ್ಯ, ಶ್ರೀಮತಿ ಬಸವರಾಜೇಶ್ವರಿ, ಶ್ರೀ ಬಸವರಾಜಪ್ಪ, ಶ್ರೀಮತಿ ಸರೋಜ ಪಾಟೀಲ್ ಮತ್ತು ಶ್ರೀ ದೇವೇಂದ್ರಪ್ಪ ಇವರನ್ನು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಸನ್ಮಾನಿಸಿ, ಈ ಕಾರ್ಯಕ್ರಮದಲ್ಲಿ ಡಾ. ಪಂಚಾಕ್ಷರಪ್ಪ ಇವರು ರೈತರ ದೈಹಿಕ ಆರೋಗ್ಯ ಸಂರಕ್ಷಣೆ ಬಗ್ಗೆ ಉಪನ್ಯಾಸವನ್ನು ನೀಡಿದರು.



ಡಿಸೆಂಬರ್ 04 ರಂದು ಕೇಂದ್ರದ ಕದಳೀವನದಲ್ಲಿ ಹಮ್ಮಿಕೊಂಡ ಕೃಷಿ ಮಹಿಳಾ ದಿನಾಚರಣೆಯಲ್ಲಿ ರಾಜ್ಯ ಕೃಷಿ ಪಂಡಿತ ಪ್ರಶಸ್ತಿ ವಿಜೇತೆ ಹಾಗೂ ಪ್ರಗತಿಪರ ರೈತ ಮಹಿಳೆ ಶ್ರೀಮತಿ ಸರೋಜ ಪಾಟೀಲ್, ನಿಟ್ಟೂರು ಹಾಗೂ ಶ್ರೀ ರಾಜಶೇಖರ ಎಸ್. ಬಿ. ಸಹಾಯಕ ಕೃಷಿ ನಿರ್ದೇಶಕರು ದಾವಣಗೆರೆ ಇವರಿಂದ ಉಪನ್ಯಾಸ.

## ಆಯೋಜಿಸಲಾದ ವಿಶೇಷ ತರಬೇತಿ ಕಾರ್ಯಕ್ರಮಗಳು:



ಪ್ರತಿ ತಿಂಗಳ ಮೊದಲನೇ ಮತ್ತು ಮೂರನೇ ಸೋಮವಾರ **ಕೃಷಿ ಇಲಾಖೆಯ ವಿಸ್ತರಣಾ ಕಾರ್ಯಕರ್ತರಿಗೆ** ಆಧುನಿಕ ತಂತ್ರಜ್ಞಾನಗಳ ಕುರಿತ ತರಬೇತಿ (ಚನ್ನಗಿರಿ, ಜಗಳೂರು, ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳು)



ದಿನಾಂಕ 19-12-2008 ಮತ್ತು 20-12-2008 ರಂದು ವಿಶ್ವಬ್ಯಾಂಕ್ ಅನುದಾನಿತ ಯು.ಬಿ.ಡಿ.ಟಿ. ಮತ್ತು ಟೆಕ್ಸಿಪ್ ಸಹಯೋಗದೊಂದಿಗೆ ತೀರ್ಥರಾಮೇಶ್ವರದಲ್ಲಿ ಹೊನ್ನಾಳಿ ತಾಲ್ಲೂಕಿನ ರೈತ ಮತ್ತು ರೈತ ಮಹಿಳೆಯರಿಗೆ **'ಕೃಷಿಯಲ್ಲಿ ಜೈವಿಕ ಗೊಬ್ಬರಗಳ ಉಪಯುಕ್ತತೆ'** ಕುರಿತು ಡಾ. ಪ್ರದೀಪ್ ಹೆಚ್.ಎಂ. ಮತ್ತು ಶ್ರೀ ಮಲ್ಲಿಕಾರ್ಜುನ ಬಿ.ಓ. ಇವರುಗಳು ತರಬೇತಿಯನ್ನು ನೀಡಿರುತ್ತಾರೆ.



17-10-2008 ಹರಪನಹಳ್ಳಿ ಜಲಾನಯನ ಅಭಿವೃದ್ಧಿ ಇಲಾಖೆ, ವಿಸ್ತರಣಾ ಕಾರ್ಯಕರ್ತರ ಹಾಗೂ ರೈತರು **"ವಿವಿಧ ಜಲವಿನ್ಯಾಸಗಳಲ್ಲಿ ಮೀನುಕೃಷಿ"** ತರಬೇತಿ - ಡಾ. ದೇವರಾಜ ಟಿ.ಎನ್.



ರಾಷ್ಟ್ರೀಯ ಸಮ ವಿಕಾಸ ಯೋಜನೆಯಡಿಯಲ್ಲಿ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ದಾವಣಗೆರೆ ಪ್ರಾಯೋಜಿತ **'ಸುಧಾರಿತ ಸಮಗ್ರ ಹೈನುಗಾರಿಕೆ ಮತ್ತು ಇತರೆ ಕೃಷಿ ಪದ್ಧತಿಗಳು'** ಕುರಿತು 3 ದಿನಗಳ ಒಟ್ಟು 8 ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಸ್ವ-ಸಹಾಯ ಸಂಘದ ಒಟ್ಟು 640 ರೈತ/ರೈತ ಮಹಿಳೆಯರಿಗೆ ನೀಡಲಾಗಿದೆ.



ಸ್ವರ್ಣ ಜಯಂತಿ ಗ್ರಾಮ ಸ್ವ-ರೋಜ್‌ಗಾರ್ ಯೋಜನೆಯಡಿ ಜಿಲ್ಲಾ ಪಂಚಾಯತ್, ದಾವಣಗೆರೆ ಪ್ರಾಯೋಜಿತ **ಎರೆಗೊಬ್ಬರ ತಯಾರಿಕೆ, ನೀರು ನಿರ್ವಹಣೆ ಮತ್ತು ಹೈನುಗಾರಿಕೆ** ಕುರಿತು 3 ದಿನಗಳ ಒಟ್ಟು 2 ಕೌಶಲ್ಯಭರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನ ಮಹಿಳಾ ಸ್ವ-ಸಹಾಯ ಸಂಘದ ಒಟ್ಟು 120 ಸದಸ್ಯರುಗಳಿಗೆ ನೀಡಲಾಗಿದೆ.



ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್), ಬದುಕು ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ಹಾಗೂ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಇವರುಗಳ ಸಹಯೋಗದೊಂದಿಗೆ ದಿನಾಂಕ 22-12-2008 ಮತ್ತು 23-12-2008 ರಂದು ಬಿದರಕೆರೆ ನಾಲಾ ಜಲಾನಯನ ಸಮಿತಿ ಸದಸ್ಯರುಗಳಿಗೆ ಎರಡು ದಿನದ ತರಬೇತಿ ಕಾರ್ಯಕ್ರಮ.

## ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ ಕಾರ್ಯಾಗಾರಗಳು/ಕಮ್ಮಟಗಳು/ವಿಚಾರಗಳು/ ವಿಚಾರ ಸಂಕಿರಣಗಳು/ಸಭೆಗಳು/ಸಂಪನ್ಮೂಲ ವ್ಯಕ್ತಿಗಳಾಗಿ

ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟ ಸಮೀಕ್ಷೆ (4-10-2008)
ಶ್ರೀ ಬಸವನಗೌಡ ಎಂ. ಜಿ., ಶ್ರೀ ಪ್ರಸನ್ನಕುಮಾರ ಎನ್. ಮತ್ತು ತೋಟಗಾರಿಕೆ ಇಲಾಖೆ, ದಾವಣಗೆರೆ.

**ಎನ್.ಎಸ್.ಎಸ್. ಶಿಬಿರದ ಕೃಷಿ ವಿಚಾರಗಳು :-**

ಹಾಲವರ್ತಿ (8-10-2008) ದಾವಣಗೆರೆ ತಾ॥ - ಡಾ. ಜಯದೇವಪ್ಪ ಜಿ. ಕೆ. ಮತ್ತು ಶ್ರೀ ಪ್ರಸನ್ನಕುಮಾರ ಎನ್.
ಬಹದ್ದೂರಘಟ್ಟ (13-10-2008) ದಾವಣಗೆರೆ ತಾ॥ - ಡಾ. ದೇವರಾಜ ಟಿ.ಎನ್.
ಮುತ್ತುಗದೂರು (15-10-2008) ಹೊಳಲ್ಕೆರೆ ತಾ॥ - ಶ್ರೀ ಪ್ರಸನ್ನಕುಮಾರ ಎನ್. ಮತ್ತು ಡಾ. ಪ್ರದೀಪ್ ಹೆಚ್.ಎಂ.
ಪುಣಜೂರು (15-10-2008) ಹೊಳಲ್ಕೆರೆ ತಾ॥ - ಶ್ರೀ ವಿಜಯಕುಮಾರ. ಎಸ್.ಬಿ.
ಕೃಷಿ ವಿಜ್ಞಾನ ಕೇಂದ್ರ, ಗೋವಾದಲ್ಲಿ 03-11-2008 ರಿಂದ 6-11-2008 ರವರೆಗೆ Annual Review Meeting ನಲ್ಲಿ ತರಬಾಳು ಕೃಷಿ ವಿಜ್ಞಾನ ಕೇಂದ್ರದ 2007-08 ರ ವಾರ್ಷಿಕ ವರದಿ ಮಂಡಿಸಲಾಯಿತು - ಡಾ. ದೇವರಾಜ ಟಿ. ಎನ್.
ಜಗಳೂರು ತಾ॥ ಕಟ್ಟಿಗೆಹಳ್ಳಿ ಗ್ರಾಮದ ಸಮಸ್ಯಾತ್ಮಕ ಹತ್ತಿಯ ತಾಕುಗಳಿಗೆ ವೈಜ್ಞಾನಿಕ ಭೇಟಿ (5-11-2008) - ಶ್ರೀ ಪ್ರಸನ್ನಕುಮಾರ ಎನ್. ಮತ್ತು ಕೃಷಿ ಇಲಾಖೆ ಅಧಿಕಾರಿಗಳು, ಜಗಳೂರು.
ಕುಂಬಳೂರು ಗ್ರಾಮ ಹರಿಹರ ತಾ॥ ಭತ್ತವೈಭವ ಮತ್ತು ಕೃಷಿ ಚರ್ಚಾಗೋಷ್ಠಿ (7-11-2008) - ಶ್ರೀ ಬಸವನಗೌಡ ಎಂ. ಜಿ.
ಕೃಷಿ ಇಲಾಖೆ ಧಾರವಾಡ - ರೈತ ಕ್ಷೇತ್ರ ಪಾಠಶಾಲೆ ಕುರಿತು ಕಾಟನ್ ಮಿಷನ್, ಮುಂಬಯಿ 14-11-2008 ಮತ್ತು 15-11-2008 ರಂದು ಆಯೋಜಿಸಿದ ರಾಷ್ಟ್ರೀಯ ಮಟ್ಟದ ತರಭೇತಿ - ಶ್ರೀ ಮಲ್ಲಿಕಾರ್ಜುನ.ಬಿ.ಓ.
ಕೃಷಿ ಮೇಳ -2008, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು - ಶ್ರೀ ಪ್ರಸನ್ನಕುಮಾರ ಎನ್. ಮತ್ತು ಡಾ. ಪ್ರದೀಪ್ ಹೆಚ್.ಎಂ.
ದೊಡ್ಡೇರಹಳ್ಳಿ ಗ್ರಾಮ ಹೊನ್ನಾಳಿ ತಾ॥ 4-12-2008 ರಂದು ಕೃಷಿ ಇಲಾಖೆ, ಹೊನ್ನಾಳಿ ಆಯೋಜಿಸಿದ ರೈತ ಕ್ಷೇತ್ರ ಪಾಠಶಾಲೆ **"ಹತ್ತಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ"** ಕ್ಷೇತ್ರೋತ್ಸವ - ಶ್ರೀ ಪ್ರಸನ್ನಕುಮಾರ ಎನ್.
ಆಕಾಶವಾಣಿ, ಭದ್ರಾವತಿಯವರು 17-12-2008 ರಂದು ಚಿಕ್ಕಮಗಳೂರಿನಲ್ಲಿ ಆಯೋಜಿಸಿದ "ಗ್ರಾಮೀಣ ಕಾರ್ಯಕ್ರಮ ಸಲಹಾ ಸಮಿತಿ" ತ್ರೈಮಾಸಿಕ ಸಭೆ - ಶ್ರೀ ಪ್ರಸನ್ನ ಕುಮಾರ ಎನ್.



ಡಿಸೆಂಬರ್ 2008 ನಾಗಲ್ಯಾಂಡ್ ರಾಜ್ಯದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ದಾವಣಗೆರೆಯ ಸೆಂಟ್ ಪಾಲ್ಸ್ ಕಾನ್ವೆಂಟ್‌ನ ಮಾನಸ ಮತ್ತು ತಂಡದವರು
**"ಸೀತಾಫಲ ಹಣ್ಣಿನಲ್ಲಿ ಕೀಟನಾಶಕದ ಗುಣ"** ಯೋಜನೆ ಮಂಡಿಸಿ ಅತ್ಯುತ್ತಮ ಯೋಜನೆ ಪ್ರಶಸ್ತಿ ಪಡೆದಿರುತ್ತಾರೆ.
ಮಾರ್ಗದರ್ಶನ. - ಶ್ರೀ ಬಸವನಗೌಡ ಎಂ.ಜಿ. ಮತ್ತು ಡಾ. ಪ್ರದೀಪ್ ಹೆಚ್. ಎಂ.

# ಗಣ್ಯರ ಭೇಟಿ



ಶ್ರೀಯುತ ಅಯ್ಯಪ್ಪ ಮಸಗಿ, ಜಲಸಾಕ್ಷರತೆ ಸಂಸ್ಥೆಯ ತಜ್ಞರು, ಪ್ರತಿಷ್ಠಿತ ಅಶೋಕ ಫೆಲೋ ಪ್ರಶಸ್ತಿ ವಿಜೇತರು ಇವರಿಂದ ಕೇಸರಿವನದಲ್ಲಿರುವ ಕೃಷಿ ಅರಣ್ಯ ವಿಭಾಗದ ವೀಕ್ಷಣೆ ಹಾಗೂ ಸಲಹೆ ಸೂಚನೆಗಳು.



ಶ್ರೀಯುತ ಆರ್. ಜಿ. ಗೊಲ್ಲರ್, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ ಮತ್ತು ಡಾ. ಜಿ.ಎಸ್. ಷಡಾಕ್ಷರಪ್ಪ, ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ದಾವಣಗೆರೆ ಇವರಿಂದ ಕೇಂದ್ರದಲ್ಲಿರುವ ಎರೆಹುಳು ಗೊಬ್ಬರ ತಯಾರಿಕಾ ಘಟಕದ ವೀಕ್ಷಣೆ.



ಶ್ರೀಯುತ ಬಸವರಾಜನಾಯ್ಕ, ಮಾನ್ಯ ಶಾಸಕರು, ಮಾಯಕೊಂಡ ಕ್ಷೇತ್ರ ಇವರಿಂದ ಕೇಂದ್ರದಲ್ಲಿರುವ ಸಣ್ಣ ಹಳ್ಳದ ವೀಕ್ಷಣೆ. ತತ್ಸಂಬಂದ ಹಳ್ಳಕ್ಕೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಿಸಲು ಆರ್ಥಿಕ ಅನುದಾನ ನೀಡಲು ಆಶ್ವಾಸನೆ ನೀಡಿದರು.



ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆ ಇಲ್ಲಿ ನಡೆದ ಕೃಷಿ ಮೇಳದಲ್ಲಿ ಕೇಂದ್ರದ ತಂಡದ ವತಿಯಿಂದ ಪ್ರದರ್ಶಿಸಲಾದ ಕೃಷಿ ಉಪಯೋಗಿ ಮಾಹಿತಿ / ವಸ್ತು ಪ್ರದರ್ಶನದಲ್ಲಿ ಗಣ್ಯರು ಹಾಗೂ ರೈತರಿಂದ ವೀಕ್ಷಣೆ.

## ವೈಜ್ಞಾನಿಕ ಕ್ಷೇತ್ರ ಭೇಟಿ



ಭತ್ತ - ಮಲ್ಲೇನಹಳ್ಳಿ , ದಾವಣಗೆರೆ ತಾ॥



ಪಪ್ಪಾಯ- ಮೇದಿಹಳ್ಳಿ , ಹರಪನಹಳ್ಳಿ ತಾ॥



ಯಲವಟ್ಟಿ , ಹರಿಹರ ತಾ॥

## ಕ್ಷೇತ್ರೋತ್ಸವಗಳು



ದಿನಾಂಕ 5-11-2008 ರಂದು ಕಂದಗಲ್, ದಾವಣಗೆರೆ ತಾಲ್ಲೂಕು " ಭತ್ತದಲ್ಲಿ ಹೊಸ ತಳಿ ಪರಿಚಯ " (Tanu - kmp 101)



ದಿನಾಂಕ 30-10-2008 ರಂದು ಹಾಲವರ್ತಿ ಗ್ರಾಮದಲ್ಲಿ " ಮೆಕ್ಕೆಜೋಳದಲ್ಲಿ ನವೀನ ತಾಂತ್ರಿಕತೆಗಳು " NAH –2049 (ಕೇದಿಗೆ ರೋಗ ಮತ್ತು ಎಲೆ ಅಂಗಮಾರಿ ರೋಗ ನಿರೋಧಕ)

## ಹಮ್ಮಿಕೊಂಡ ತರಬೇತಿ ಕಾರ್ಯಕ್ರಮಗಳು :

1. ತೆಂಗಿನಲ್ಲಿ ಸಮಗ್ರ ಪೀಡೆ ನಿರ್ವಹಣೆ .
2. ಏಕದಳ ಹಾಗೂ ದ್ವಿದಳ ಧಾನ್ಯಗಳ ಮಿಶ್ರಣದಿಂದ ಪೌಷ್ಟಿಕ ಆಹಾರ ತಯಾರಿಕೆ.
3. ಹೈನು ರಾಸುಗಳಲ್ಲಿ ಸಾಂಕ್ರಾಮಿಕ ರೋಗಗಳು ಮತ್ತು ಅವುಗಳ ಹತೋಟಿ.
   ಹೈನು ರಾಸುಗಳಲ್ಲಿ ಆಹಾರ ನಿರ್ವಹಣೆ.
4. ದಿನನಿತ್ಯದ ಬಳಕೆಯ ವಸ್ತುಗಳ ತಯಾರಿಕೆ ಮತ್ತು ಅವುಗಳ ಮಾರಾಟ ತಾಂತ್ರಿಕತೆಗಳು.
5. ಮಣ್ಣು ಮತ್ತು ನೀರು ನಿರ್ವಹಣೆ, ವಿವಿಧ ಹಣ್ಣು ಬೆಳೆಗಳ ಔಷಧೀಯ ಗುಣಗಳು.
6. ಆಹಾರ ಭದ್ರತೆಗಾಗಿ ಕೈತೋಟ ನಿರ್ಮಾಣ ಮತ್ತು ಮಳೆ ನೀರು ಕೊಯ್ಲು.
7. ಕಡಲೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು ಮತ್ತು ಸಮಗ್ರ ಪೀಡೆ ನಿರ್ವಹಣೆ.

## ಪದ್ದತಿ ಪ್ರಾತ್ಯಕ್ಷಿಕೆಗಳು



ಮಣ್ಣು ಮಾದರಿ ಸಂಗ್ರಹಿಸುವಿಕೆ

ಸ್ವಸಹಾಯ ಸಂಘದ ಸದಸ್ಯರುಗಳಿಗೆ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ





ಬೇರಿನ ಮೂಲಕ ಕೋಕೋನಟ್ ಟಾನಿಕ್ ಉಪಚಾರ

ಕಡಲೆಯಲ್ಲಿ ಟ್ರೈಕೋಡರ್ಮದಿಂದ ಬೀಜೋಪಚಾರ ಮತ್ತು ಮೋಹಕ ಬಲೆ ಅಳವಡಿಕೆ



## ಹಮ್ಮಿಕೊಂಡ ತರಬೇತಿ ಕಾರ್ಯಕ್ರಮಗಳು

- ಅಧಿಕ ಇಳುವರಿ ಮೆಕ್ಕೆಜೋಳ ತಳಿ (NAH-2049)
- ಅಧಿಕ ಇಳುವರಿ ಭತ್ತ ತಳಿ ( KMP - 101)
- ಬೂದಿರೋಗ ನಿರೋಧಕ ಸೂರ್ಯಕಾಂತಿ ತಳಿ (KBSH - 53)
- ಒಣ ಬೇಸಾಯಕ್ಕೆ ಸೂಕ್ತ ಮೆಣಸಿನಕಾಯಿ ತಳಿ (ಸಂಮೃದ್ಧಿ)
- ನೇರಳೆ ಎಲೆ ಮಚ್ಚೆ ರೋಗ ನಿರೋಧಕ ಈರುಳ್ಳಿ ತಳಿ (ಅರ್ಕ ಕಲ್ಯಾಣ್)
- ಟೊಮ್ಯಾಟೋದಲ್ಲಿ ಸಮಗ್ರ ಪೀಡೆ ನಿರ್ವಹಣೆ
- ತೊಗರಿಯಲ್ಲಿ ಕಾಯಿಕೊರಕದ ಸಮಗ್ರ ನಿರ್ವಹಣೆ



27-29 ಡಿಸೆಂಬರ್ 2008 ಜಿ. ಬಿ. ಪಂತ, ಕೃಷಿ ವಿಶ್ವ ವಿದ್ಯಾಲಯ , ಪಂತನಗರ, 3 ನೇ ರಾಷ್ಟ್ರೀಯ ಕೆವಿಕೆಗಳ ಸಮ್ಮೇಳನ - ಡಾ. ದೇವರಾಜ ಟಿ.ಎನ್. ಮತ್ತು ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಕೆ.ಪಿ. ಬಸವರಾಜು

**ಬಿತ್ತರಗೊಂಡ ನಮ್ಮ ಕಾರ್ಯಕ್ರಮಗಳು :**

ಆಕಾಶವಾಣಿ ಭದ್ರಾವತಿಗೆ ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ. ಎನ್. ರವರು 'ಮೀನುಮರಿಗಳ ಉತ್ಪಾದನೆ ಮತ್ತು ಪಾಲನೆ' ಕುರಿತು ಸಂದರ್ಶನ ಕಾರ್ಯಕ್ರಮವನ್ನು ನೀಡಿರುತ್ತಾರೆ. 28-11-2008

## ಮುಂದಿನ ಮೂರು ತಿಂಗಳುಗಳಿಗೆ ಕೃಷಿ ಮುನ್ಸೂಚನೆಗಳು :-

ಮಣ್ಣಿನ ಫಲವತ್ತತೆ ಕುಂಠಿತವಾಗಿರುವ ಹಾಗೂ ಹಲವಾರು ಸಮಸ್ಯಾತ್ಮಕ ಮಣ್ಣುಗಳಲ್ಲೇ ಬೆಳೆಗಳನ್ನು ಬೆಳೆಯುವ ಅನಿವಾರ್ಯತೆಯನ್ನು ಇಂದು ರೈತ ಸಮುದಾಯ ಎದುರಿಸುತ್ತಿದೆ. ಇಂತಹ ಸ್ಥಿತಿಯಲ್ಲಿ ಮಣ್ಣಿನ ಆರೋಗ್ಯ ಹಾಗೂ ಫಲವತ್ತತೆಯನ್ನು ಅರಿಯುವುದು ಅತ್ಯಂತ ಸೂಕ್ತವಾಗಿದೆ. ರೈತ ಸಮುದಾಯ ಎದುರಿಸುತ್ತಿದೆ. ಇಂತಹ ಸ್ಥಿತಿಯಲ್ಲಿ ಮಣ್ಣಿನ ಆರೋಗ್ಯ ಹಾಗೂ ಫಲವತ್ತತೆಯನ್ನು ಅರಿವುದು ಅತ್ಯಂತ ಸೂಕ್ತವಾಗಿದೆ. ರೈತರು ತಮ್ಮ ಜಮೀನಿನಲ್ಲಿ ಮಣ್ಣಿನ ಮಾದರಿಯನ್ನು ಸಮರ್ಪಕವಾಗಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿ ಅದರ ಅನುಸಾರ ಗೊಬ್ಬರ ಬಳಸುವುದು.

**ಸೂರ್ಯಕಾಂತಿಯಲ್ಲಿ ಕಪ್ಪುತಲೆ ಕಂಬಳಿ ಹುಳು ನಿರ್ವಹಣೆ :**

**ಲಕ್ಷಣ :** ಎಲೆಗಳನ್ನು ಪೂರ್ತಿ ತಿಂದು ಸಸ್ಯಗಳನ್ನು ನಾಶ ಮಾಡುತ್ತವೆ.

**ಹತೋಟಿ :** ಕೈಯಿಂದ ತತ್ತಿಗಳನ್ನು ನಾಶಮಾಡಿ ಹುಳುಗಳನ್ನು ಆರಿಸಿ ಸೀಮೆ ಎಣ್ಣೆಯಲ್ಲಿ ಹಾಕಿ ಸುಡಬೇಕು. ಬೇವಿನ ಬೀಜದ ಕಷಾಯ (ಶೇ .5) ಅಥವಾ ಬೇವು ಆಧಾರಿತ ಕೀಟನಾಶಕ (2 ಮಿ.ಲೀ./ಲೀ.) ಸಿಂಪಡಿಸಬೇಕು ಹಾವಳಿ ಜಾಸ್ತಿಯಿದ್ದಲ್ಲಿ ಸೈಪರ್‌ಮೆಥ್ರಿನ್ 1 ಮಿ.ಲೀ/ಲೀ. ಸಿಂಪಡಿಸಬೇಕು.

**ಕಡಲೆಯಲ್ಲಿ ಕಾಯಿಕೊರಕ ನಿರ್ವಹಣೆ :**

**ಲಕ್ಷಣ :** ಮರಿಹುಳಗಳು ಎಲೆಯನ್ನು ಕೆರೆದು ತಿಂದು ನಂತರ ಮೊಗ್ಗು ಮತ್ತು ಕಾಯಿಗಳನ್ನು ಕೊರೆದು ತಿನ್ನುತ್ತವೆ.

**ಹತೋಟಿ :** ಕ್ವಿನಾಲ್‌ಫಾಸ್ (2 ಮಿ.ಲೀ./ಲೀ.) ಸಿಂಪರಣೆ ಅಥವಾ ಶೇ 5 ಮ್ಯಾಲಥಿಯಾನ್ (10 ಕೆ.ಜಿ./ಎಕರೆ) ಧೂಳೀಕರಿಸಬೇಕು.

**ಭತ್ತದಲ್ಲಿ ಸಸಿ ಮಡಿ ನಿರ್ವಹಣೆ :** ಸಸಿಮಡಿಯಲ್ಲಿ ಬೆಳವಣಿಗೆಗಾಗಿ 17:17:17, 1 ಕೆ.ಜಿ. ಯನ್ನು 100 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ನಾಟಿ ಸಮಯದಲ್ಲಿ ಸಸಿಗಳ ತುದಿಯನ್ನು ಚಿವುಟಿ ನಾಟಿ ಮಾಡಿ, ಕಾಂಡಕೊರಕ ಮೊಟ್ಟೆಗಳನ್ನು ನಾಶಮಾಡಬೇಕು. ನಾಟಿ ಸಮಯದಲ್ಲಿ ಸಸಿಗಳನ್ನು 400 ಗ್ರಾಂ ಅಜೋಸ್ಪಿರಿಲಂ ಜೈವಿಕ ಗೊಬ್ಬರದ ಮಿಶ್ರಣದಲ್ಲಿ ಅದ್ದಿ ನಾಟಿ ಮಾಡಬೇಕು.

**ಭತ್ತದಲ್ಲಿ ಕಾಂಡ ಕೊರಕ ನಿರ್ವಹಣೆ :**

**ಲಕ್ಷಣ :** ಪ್ರಾರಂಭದಲ್ಲಿ ಪೈರಿನ ಸುಳಿ ಒಣಗುತ್ತದೆ. ತೆನೆ ಹಂತದಲ್ಲಿ ಕಾಳುಗಳು ಜೊಳ್ಳಾಗುತ್ತವೆ.

**ಹತೋಟಿ :** ಬದುಗಳ ಸ್ವಚ್ಛತೆ. ಪತಂಗಗಳ ಬೆಳಕಿಗೆ ಆಕರ್ಷಣೆ, ಕ್ಲೋರೋಪೈರಿಪಾಸ್ ಅಥವಾ ಎಂಡೋಸಲ್ಫಾನ್ ( 2 ಮಿ.ಲೀ./ಲೀ.) ಸಿಂಪರಣೆ.

**ಭತ್ತದಲ್ಲಿ ಎಲೆ ಸುರುಳಿ ನಿರ್ವಹಣೆ :**

**ಲಕ್ಷಣ :** ಗರಿಗಳನ್ನು ಒಳಭಾಗಕ್ಕೆ ಸುರುಳಿ ಸುತ್ತಿ ಹಸಿರು ಭಾಗವನ್ನು ಕೆರೆದು ತಿನ್ನುತ್ತವೆ, ಪೈರು ಬೆಳ್ಳಗೆ ಬಿಳಿಚಿಕೊಂಡಂತೆ ಕಾಣುತ್ತದೆ.

**ಹತೋಟಿ :** ಬೇವು ಆಧಾರಿತ ಕೀಟನಾಶಕಗಳನ್ನು (3 ಮಿ.ಲೀ./ಲೀ ) ಸಿಂಪಡಿಸಬೇಕು.

**ಬಾಳೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ :** ಒಂದು ಲೀಟರ್ ನೀರಿನಲ್ಲಿ **5 ಗ್ರಾಂ ಬೆಳೆ ವಿಶೇಷವನ್ನು** ಕರಗಿಸಿರಿ (ಅಂದರೆ 15 ಲೀಟರ್ ಬಕೆಟ್ ನೀರಿನಲ್ಲಿ 75 ಗ್ರಾಂ) ಪ್ರತಿ 10 ಲೀ. ದ್ರಾವಣಕ್ಕೆ 3 ಮಿ .ಲೀ. "ಆಪ್ಸಾ-80" ಎಂಬ ಸೋಪಿನ ದ್ರವ ಅಥವಾ 2 ಶ್ಯಾಂಪೂವನ್ನು ಬೆರೆಸಿ. ದ್ರಾವಣದ ರಸಸಾರವನ್ನು ಸರಿಪಡಿಸಲು ಪ್ರತಿ 15 ಲೀ. 2 ನಿಂಬೆಹಣ್ಣುಗಳ ರಸವನ್ನು ಹಿಂಡಿ ಬೆರೆಸಿರಿ. ಯಾವುದೇ ಶಿಲೀಂದ್ರ ನಾಶಕ ಅಥವಾ ಕೀಟನಾಶಕವನ್ನು ಸಿಂಪಡಿಸುವುದಿದ್ದರೆ ಅದನ್ನು ಬೆರೆಸಿ ಕೂಡಾ ಸಿಂಪಡಿಸಬಹುದು. ಮೊದಲನೆಯ ಸಿಂಪರಣೆಯನ್ನು ನಾಟಿ ಮಾಡಿದ 5 ತಿಂಗಳ ನಂತರ , ಹಾಗೂ ಉಳಿದ ಸಿಂಪರಣೆಗಳು 6,7 ಹಾಗೂ 8 ನೇ ತಿಂಗಳ ನಂತರ ಕೊಡಬೇಕು. ಹೂ ಗೊನೆ ಬಂದ ಕೂಡಲೇ ಮತ್ತೊಂದು ಸಿಂಪರಣೆ ಕೊಟ್ಟ , 1 ತಿಂಗಳ ಬಳಿಕ ಗೊನೆಯ ಮೇಲೆ ಕಡೆಯ ಸಿಂಪರಣೆಯನ್ನು ಕೊಡಬೇಕು. ಒಟ್ಟು 6 ಸಿಂಪರಣೆಗಳನ್ನು ಕೊಡಬೇಕು.

---

ಸಂಪಾದಕರು ಮತ್ತು ಪ್ರಕಾಶಕರು : **ಡಾ॥ ದೇವರಾಜ ಟಿ.ಎನ್.**, ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ - 577 002 , ಕರ್ನಾಟಕ
ದೂರವಾಣಿ ಸಂಖ್ಯೆ.: 08192-294568. ಮಿಂಚಂಚೆ : tkvk@taralabalu.org
ಸಹ ಸಂಪಾದಕರು : **ಶ್ರೀ ಮಲ್ಲಿಕಾರ್ಜುನ ಬಿ. ಓ., ಶ್ರೀ ಬಸವನಗೌಡ ಎಂ.ಜಿ., ಡಾ॥ ಜಯದೇವಪ್ಪ ಜಿ.ಕೆ., ಶ್ರೀ ರಘುರಾಜ ಜೆ., ಶ್ರೀ ಪ್ರಸನ್ನ ಕುಮಾರ ಎನ್., ಡಾ॥ ಪ್ರದೀಪ್ ಹೆಚ್. ಎಂ., ಕುಮಾರಿ ಕವಿತ ಪಿ., ಶ್ರೀ ವಿಜಯಕುಮಾರ್ ಎಸ್.ಬಿ. ಮತ್ತು ಶ್ರೀ ಸಂತೋಷ್ ಬಿ.**
ಮುದ್ರಕರು : ಅಶ್ವಿನಿ ಪ್ರಿಂಟರ್ಸ್, ದಾವಣಗೆರೆ. ಫೋ : 253341.